ನೋಡಿದರೆ ಹೊರಗಿನವರಂತೂ ಇರಲಾರರು! ಹುಡುಗನ ಮೋರೆಯ ಮೇಲಿನ ಗೊಂದಲವನ್ನು ಅರ್ಥ ಮಾಡಿಕೊಂಡವನ ಹಾಗೆ ರಾವ್‌ಜೀಭಾಯಿ – 'ನಾನು ಐದನೇ ಮಜಲೆಯ ಮೇಲೆ ಮೊನ್ನೆಮೊನ್ನೆಯಷ್ಟೇ ನಿಲ್ಲಲು ಬಂದ ರಾವ್‌ಜೀಭಾಯಿ ಶಹ' ಎನ್ನುತ್ತ ಮುಗುಳ್ನಕ್ಕ. ಲಿಫ್ಟಿನ ಹುಡುಗ ಎರಡೂ ಕೈಜೋಡಿಸಿ ನಮಸ್ಕರಿಸಿದಾಗ ಮಮತೆಯಿಂದ ಅವನ ಭುಜ ತಟ್ಟಿದ. ಎಂಟನೇ ಮಜಲೆಗೆ ಬಂದ ಕೂಡಲೇ ಲಿಫ್ಟಿನ ಕದ ತೆರೆದು– 'ತಾವು ಹೋಗಬೇಕಾದ ಜಾಗ' ಎಂದು ಲಿಫ್ಟಿನ ಹುಡುಗ ಎಚ್ಚರಿಸಿದಾಗ, 'ಈಗ ಹೊರಟಿದ್ದು ಸೆಕ್ರೆಟರಿಯ ಮನೆಗೆ. ಇದೇ ಮಜಲೆಯ ಮೇಲೆ ಅಲ್ಲವೆ?' ಎಂದು ಕೇಳಿದ. 'ಹೌದು ಹೌದು. ಫ್ಲ್ಯಾಟ್ ನಂಬರ್ 22. ಆದರೆ ಮನೆಯಲ್ಲೀಗ ಇದ್ದಾರೋ ಇಲ್ಲವೋ, ಗೊತ್ತಿಲ್ಲ. ಗಂಡ–ಹೆಂಡತಿ ಬೆಳಗಿಗೇ ಹೊರಗೆ ಹೋಗುವಾಗ ನೋಡಿದ್ದೆ.' ಎನ್ನುತ್ತಿದ್ದ ಹಾಗೆ ಮುದುಕನ ಮೋರೆಯ ಮೇಲೆ ಮೊಳೆಯ ತೊಡಗಿದ ತೀವ್ರವಾದ ನಿರಾಸೆಯನ್ನು ನೋಡುತ್ತಲೇ, 'ಹೋಗಿ ನೋಡಿ. ನಾನು ಊಟಕ್ಕೆ ಹೋಗಿದ್ದಾಗ ಬಂದಿದ್ದರೂ ಬಂದಿದ್ದಾರು, ಅವರೇ ಇಲ್ಲದಿದ್ದರೂ ಅವರ ಅಜ್ಜಅಜ್ಜಿ ಇದ್ದೇ ಇರುತ್ತಾರೆ. ಅವರು ಎಲ್ಲೂ ಹೋಗುವುದಿಲ್ಲ. ತುಂಬ ಮುದುಕರು. ಆಳುಕಾಳು ಇದ್ದಾರೆ ಮೇಲಾಗಿ, ನಾನು ಕೆಳಗೆ ಹೋಗಬೇಕಾದರೆ ಮತ್ತೆ ಬರುತ್ತೇನೆ' ಎಂದ ಲಿಫ್ಟಿನ ಹುಡುಗ. ಮೊದಲ ಭೇಟಿಯಲ್ಲೇ ಮುದುಕ ಬಹಳ ಸೇರಿದ್ದ. ಆಗಬಹುದು ಎನ್ನುವಂತೆ ಸುಖವಾಗಿ ಮುಗುಳ್ನಗುತ್ತ ರಾವ್‌ಜೀಭಾಯಿ ಸೆಕ್ರೆಟರಿಯ ಮನೆಯನ್ನು ಹುಡುಕಿ ಹೊರಟ.

ರಾವ್‌ಜೀಭಾಯಿ ಸೆಕ್ರೆಟರಿಯನ್ನು ಈವರೆಗೂ ನೋಡಿರಲಿಲ್ಲ. ಅವನ ಬಗ್ಗೆ ತನ್ನ ಮಕ್ಕಳಿಂದ ಕೇಳಿ ಗೊತ್ತಿತ್ತು. 36 ಮನೆಗಳುಳ್ಳ ಈ ಸೊಸೈಟಿಯ ದೇಖರೇಖಿಯನ್ನು ತುಂಬ ದಕ್ಷತೆಯಿಂದ ನೋಡಿಗೊಳ್ಳುತ್ತಾನೆಂದೂ ಎಂಟನೇ ಮಜಲೆಯ ಮೇಲೆ ಇರುತ್ತಾನೆಂದೂ ತಿಳಿದಿತ್ತು. ಮಾತನಾಡುವಾಗ ಮಕ್ಕಳಿಬ್ಬರೂ ಸೆಕ್ರೆಟರಿಯೆಂದು ಉಲ್ಲೇಖಿಸುತ್ತಿದ್ದರೇ ಹೊರತು ಹೆಸರನ್ನು ಹೇಳಿರಲಿಲ್ಲ. ಹೇಳಿದ್ದರೂ ಹೇಳಿರಬಹುದು. ತನಗೆ ಇತ್ತಿತ್ತ ನೆನಪೂ ಅಷ್ಟಕ್ಕಷ್ಟೇ. ತಾನು ಬಂದಂಥ ಕೆಲಸಕ್ಕೆ ಸದ್ಯ ಹೆಸರು ಮುಖ್ಯ ಅಲ್ಲವಲ್ಲ. ಈಗ ಕೇಳಿಕೊಂಡರಾಯಿತು. ಅದರಲ್ಲೇನಂತೆ? ಲಿಫ್ಟಿನ ಹುಡುಗ ಮನೆಯ ನಂಬರು ಹೇಳಿದ್ದು ಒಳ್ಳೆಯದಾಯಿತು: ರಾವ್‌ಜೀಭಾಯಿ 22ನೇ ನಂಬರು ಮನೆಯ ಬಾಗಿಲಿಗೆ ಬಂದು ಕರೆಗಂಟೆಯ ಸ್ವಿಚ್ ಒತ್ತಿ ಕದ ತೆರೆಯುವ ಅವಕಾಶವನ್ನು ಉತ್ಕಂಠೆಯಿಂದ ಕಾದ. ಕಾರಿಡಾರಿನ ಇಬ್ಬದಿಯ ಮನೆಗಳಿಂದಲೂ ಕಮಂಗ ವಾಸನೆ ಇಡುಗಿತ್ತು; ಮಾಂಸಾಹಾರಿಗಳೇನೋ. ಊಟದ ಸಿದ್ಧತೆಯಿರಬೇಕು– ತಾಟು ಪೇಲೆಗಳ ಸದ್ದೂ ಕೇಳಿಸುತ್ತಿದೆ. ಇವತ್ತು ರವಿವಾರ. ಊಟಕ್ಕೆ ನಿಧಾನವಾಗಿರಬೇಕು. ಅಡ್ಡ ಹೊತ್ತಿಗೆ ಬಂದಿರುವೆನೇನೋ. ಸೆಕ್ರೆಟರಿಯ ಮನೆಯಲ್ಲಿ ಈಗ ಇದ್ದವರು ವಯೋವೃದ್ಧರೆಂದಮೇಲೆ ಅವರಾದರೂ ಊಟ ಮುಗಿಸಿರಬೇಕು. ಅಡ್ಡವಾಗಿರದಿದ್ದರೆ ಸಾಕು. ಸುಮಾರು 40 ದಾಟಿದ ಆಳು ಮನುಷ್ಯನೊಬ್ಬ ಕದ ತೆರೆದು, 'ಯಾರು ಬೇಕು?' ಎಂದು ಕೇಳುವ ಧರ್ತಿಯಲ್ಲಿ ಮುದುಕನನ್ನು ನೋಡುತ್ತ ನಿಂತ. ಸ್ವಚ್ಛವಾಗಿ ತೊಳೆದು ಇಸ್ತ್ರಿ ಮಾಡಿದಂತಿದ್ದ ತಿಳಿ ಹಳದೀ ಬಣ್ಣದ ಚಡ್ಡಿ ಅರ್ಧ ತೋಳುಗಳ ಬನಿಯನ್, ಹೆಗಲ ಮೇಲೆ ಸ್ವಚ್ಛ ಬಿಳಿಯ ನ್ಯಾಪ್‌ಕಿನ್, ಚಂಡಿಕೆ ಇರದಿದ್ದರೂ ಚಂಡಿಕೆ ಬಿಟ್ಟಂತೆ ತೋರುವ ತಲೆಗೂದಲು. ನೇರವಾಗಿ ಅಡುಗೆಮನೆಯಿಂದಲೇ ಬಂದವನು ಹಾಗೆ ಅಡುಗೆಯ ವಾಸನೆಯನ್ನು ಹೊತ್ತೇ ಬಂದಿದ್ದ. ರಾವ್‌ಜೀಭಾಯಿ ಮುಂದೆ ನಿಂತವನನ್ನು ತಾನು ಎಂದಿನಿಂದಲೂ ಬಲ್ಲವನ ಹಾಗೆ 'ಹ್ಯಾಗಿದ್ದೀ?' ಎಂದು ಕೇಳುವ ಶೈಲಿಯಲ್ಲಿ ಕಣ್ಣರಳಿಸಿ ನಿಲ್ಲಲು ಬಂದ ರಾವ್‌ಜೀಭಾಯಿ ಶಹ 'ಮನೆಯ